231 (945) : ಶ್ರೀ ಚಿಕ್ಕನಗೌಡರು ಸಿದ್ದನಗೌಡ ಈಶ್ವರಗೌಡ (ಕಲಘಟಗಿ) ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಧಾರವಾಡ ಜಿಲ್ಲೆಯಲ್ಲಿರುವ ವಿವಿಧ ನ್ಯಾಯಾಲಯಗಳಿಗೆ ಸ್ವಂತ ಕಟ್ಟಡ ಇದೆಯೇ;

ಆ) ಸ್ವಂತ ಕಟ್ಟಡವಿಲ್ಲದೆ ಬೇರೆ ಬೇರೆ ಕಟ್ಟಡಗಳಲ್ಲಿ ನಡೆಯುತ್ತಿರುವ ನ್ಯಾಯಾಲಯಗಳಾವುವು;

ಇ) ಕಲಘಟಗಿ ತಾಲ್ಲೂಕಿನಲ್ಲಿ ಈ ರೀತಿಯ ಕಟ್ಟಡವಿಲ್ಲದೇ ನಿರೀಕ್ಷಣಾ ಮಂದಿರದಲ್ಲಿ ನ್ಯಾಯಾಲಯ ನಡೆಯುತ್ತಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಬಂದಿದ್ದಲ್ಲಿ ಈ ನ್ಯಾಯಾಲಯ ಕಟ್ಟಡಕ್ಕಾಗಿ ಪ್ರತ್ಯೇಕ ಸ್ಥಳವನ್ನು ಗುರುತಿಸುವುದು ಯಾವಾಗ;

ಉ) ಇದಕ್ಕೆ ಸರ್ಕಾರ ಹಣಕಾಸು ನೆರವು ನೀಡುವುದೆ;

ಊ) ನ್ಯಾಯಾಲಯವನ್ನು ನಿರೀಕ್ಷಣಾ ಮಂದಿರದ ಬದಲಿಗೆ ಬೇರೆ ಕಟ್ಟಡಕ್ಕೆ ಕೂಡಲೇ ಸ್ಥಳಾಂತರಿಸಲು ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಹೆಚ್.ಕೆ. ಪಾಟೀಲ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು)

ಅ) ಕಲಘಟಗಿಯಲ್ಲಿರುವ ಸಿವಿಲ್ ನ್ಯಾಯಾಧೀಶರು (ಕಿರಿಯ ವಿಭಾಗ) ಕೋರ್ಟ್‌ನ್ನು ಹೊರತುಪಡಿಸಿ ಉಳಿದ ಎಲ್ಲಾ ನ್ಯಾಯಾಲಯಗಳು ಸ್ವಂತ ಕಟ್ಟಡ ಹೊಂದಿವೆ.

ಆ) ಕಲಘಟಗಿಯಲ್ಲಿರುವ ಸಿವಿಲ್ ನ್ಯಾಯಾಧೀಶರು (ಕಿರಿಯ ವಿಭಾಗ) ಕೋರ್ಟ್.

ಇ) ' ಬಂದಿದೆ.

ಈ) ಮಾನ್ಯ ಜಿಲ್ಲಾಧಿಕಾರಿಗಳು ಧಾರವಾಡ ಇವರು ಕಲಘಟಗಿಯಲ್ಲಿ ನ್ಯಾಯಾಲಯ ಕಟ್ಟಡ ನಿರ್ಮಿಸಲು 1-3 ಗುಂಟೆ ಜಾಗವನ್ನು ಮಂಜೂರು ಮಾಡಿರುತ್ತಾರೆ. ಆದರೆ, ಮಂಜೂರಾಗಿರುವ ಜಾಗವನ್ನು ಸಾಲದೆಂದು ಪರಿಗಣಿಸಿ ಇನ್ನೂ 2 ಎಕರೆ ಜಾಗವನ್ನು ಮಂಜೂರು ಮಾಡಲು : ಸ್ವಾಧೀನಪಡಿಸಿ ಕೊಡಲು ಕಂದಾಯ ಇಲಾಖೆ ಅಧಿಕಾರಿಗಳನ್ನು ಕೋರಲಾಗಿದ್ದು, ಸದರಿ ಪ್ರಸ್ತಾವನೆಯು ಕಂದಾಯ ಅಧಿಕಾರಿಗಳ ಮುಂದೆ ಇರುತ್ತದೆ. ಈ ಕುರಿತು ವಕೀಲರ ಸಂಘದಿಂದ ಮನವಿಗಳು ಬಂದಿದ್ದು, ಕೆಲವೇ ದಿನಗಳಲ್ಲಿ ಸ್ಥಳಕ್ಕೆ ಭೇಟಿ ನೀಡಿ, ನಿರ್ದಿಷ್ಟ ಜಾಗೆಯನ್ನು ನಿರ್ಣಯಿಸಲಾಗುವುದು.

ಉ) ಊ ಸ್ವಾಧೀನವಾದ ನಂತರ ಕ್ರಮ ಕೈಗೊಳ್ಳಲಾಗುವುದು.

ಊ) ಕಲಘಟಗಿಯಲ್ಲಿರುವ ನ್ಯಾಯಾಲಯವನ್ನು ನಿರೀಕ್ಷಣಾ ಮಂದಿರದಿಂದ ಹಳೆ ತಾಲ್ಲೂಕು ಕಛೇರಿಗೆ (ವರ್ಗಾಯಿಸಲು) ಸ್ಥಳಾಂತರಿಸಲು ಕ್ರಮ ಕೈಗೊಳ್ಳಲಾಗಿತ್ತು. ಆದರೆ, ಕಂದಾಯ ಅಧಿಕಾರಿಗಳು ಆ ಕಟ್ಟಡ ನೀಡಲು ನಿರಾಕರಿಸಿದರು.